ಐನೂರು ಆರು ನೂರು ಕೋಟಿ ದುಡ್ಡಿನ ವಹಿವಾಟೆಂದು ಕೇಳಪಟ್ಟಿದ್ದೇನೆ.

ಆಗ್ನೇಯ, ಈ 'ಕ್ರೀಮೀ ಸ್ಪಾಂಜ್' ಬ್ರ್ಯಾಂಡಿನ ಮಾಲೀಕನ ಅಕ್ಕನ ಮೊಮ್ಮಗ. ಬ್ಯುಸಿನೆಸ್ ಮ್ಯಾನೇಜ್ಮೆಂಟ್ ಓದಿದ್ದಾನಂತೆ. ಅರಕಲಗೂಡು ಮೂಲ. ಆಸುಪಾಸಿನಲ್ಲಿ ಹೇಮಾವತಿ ದಂಡೆ. ಇಕ್ಕೆಲಕ್ಕೂ ಹಸಿರಾಗಿ ಕಣ್ಣುಕ್ಕುವ ಆಸ್ತಿಪಾಸ್ತಿ.

'ಅಲ್ಲವೋ ಹುಡುಗ... ಇಷ್ಟೆಲ್ಲ ಇದ್ದೂ ಪರದೇಸಿಯ ಹಾಗೆ ಈ ಊರಿನಲ್ಲೇನೋ ಕೆಲಸ ನಿನಗೆ?' ಪ್ರೀತಿಯಿಂದ ಗದರಿ ಕೇಳಿದ್ದೆ. ಕಸಿವಿಸಿಗೊಂಡಿದ್ದ. 'ಕನ್ನಡ ಬರುತ್ತೆ ತಾನೇ? ಆರ್ ಡು ಯು ವಾಂಟ್ ಮಿ ಸೇಯಿಂಗ್ ಇಟ್ ಇನ್ ಇಂಗ್ಲಿಷ್?'

'ಇಲ್ಲ, ಸರ್... ಚೆನ್ನಾಗಿ ಬರುತ್ತೆ...' ನಾಚಿಕೊಂಡೇ ಕನ್ನಡಕ್ಕಿಳಿದಿದ್ದ. 'ಊರಿನಲ್ಲಿದ್ದುಕೊಂಡು ಏನು ಸರ್ ಮಾಡೋದು? ಐ ಹ್ಯಾವ್ ಬಿಗ್ಗರ್ ಡ್ರೀಮ್ಸ್...'

'ಓಹ್... ಕನಸು ಕಾಣುತ್ತಲೇ ಇರೋದಲ್ಲವಾ? ನನ್ನನ್ನು ಬಂದು ನೋಡೋದೇನಿತ್ತು?'

'ಸರ್... ನಾನೇ ಬರಹೇಳಿದ್ದು. ಹಿ ನೀಡ್ಸ್ ಟು ಬಿ ಅಡ್ವೈಸ್ಡ್...' ಕುಣಾಲಿ ಮಾತು ತುರುಕಿದ್ದಳು. ಅವಳನ್ನೊಮ್ಮೆ ದೀರ್ಘವಾಗಿ ನೋಡಿ, ಅನುಮಾನಿಸುತ್ತಲೇ, 'ಸರಿ... ಏನೂಂತ ಹೇಳು...' ಎಂದು ಆಗ್ನೇಯನನ್ನು ಕೇಳಿದೆ.

'ನಾನು ರಿಯಲ್ ಎಸ್ಟೇಟ್‌ನಲ್ಲಿ ತೊಡಗಿಕೋಬೇಕು ಅಂತ ಆಸೆ... ಮುಂದೆ ನಿಮ್ಮಷ್ಟು ದೊಡ್ಡ ಆಫೀಸು ತೆರೆಯಬೇಕು... ಕ್ರೀಮೀ ಸ್ಪಾಂಜಿನಷ್ಟೇ ದೊಡ್ಡದಾದ ಸಾಮ್ರಾಜ್ಯ ಕಟ್ಟಬೇಕು...' ಹೇಳುತ್ತಲೇ ಹೋದ. ಹುಡುಗ, ಕನಸುಗಳ ವಜೆಗೆ ಜೋತಿದ್ದಾನನ್ನಿಸಿತು.

'ಕನಸೇನೋ ಚೆನ್ನಾಗಿದೆ... ಅದಕ್ಕೆ ತಕ್ಕ ಶ್ರಮ ಬೇಕು. ಇರಲಿ... ಏನು ಹೇಳು. ನಿನ್ನ ಮೊದಲ ಹೆಜ್ಜೆ ಏನು?' ಮಾತಿಗಿಳಿದಿದ್ದೆ.

ಆಗ್ನೇಯ, ಇದಾದ ಬಳಿಕ ಎರಡು ಮೂರು ಸರ್ತಿ ಬಂದು ಕಂಡ ನೆನಪು... ಈ ಎರಡನೇ ಅಥವಾ ಮೂರನೆಯ ಸರ್ತಿಯ ಹೊತ್ತಿಗೆಲ್ಲ, ಕುಣಾಲಿ, ಅವನೊಡನೆಯೇ ಬದುಕು ಕುದುರಿದೆಯೆಂದು ಒಂದಿಷ್ಟು ಬೀಗಿಕೊಂಡಿದ್ದಳು. ಆ ಮೊದಲಿನಂತೆ ತನ್ನೊಬ್ಬ ಗೆಳೆಯ ಮಾತ್ರ... ಎಂಬಂತೆ ನಡೆದುಕೊಳ್ಳಲಿಲ್ಲ. ಹನಿಮೂನೂ ಮುಗಿದು ತೀರಿರುವಷ್ಟು ಸಲಿಗೆಯಿತ್ತು!

## *(iii)*

ಇರಲಿ... ಕುಣಾಲಿಯ ವಿಷಯದಲ್ಲಿ ನನಗೆ ಇಷ್ಟವಾಗುವುದೇನೆಂದರೆ, ಹುಡುಗಿ ಮಹಾ ಮಹಾ ಸಭ್ಯೆ. ಕೆಲಸದ ನಡುವಿನ ನನ್ನ ಯಾವ ಕೋಪಾಟೋಪವನ್ನೂ ಮನಸ್ಸಿಗೆ ಹಚ್ಚಿಕೊಂಡವಳಲ್ಲ. ಬೇಸರಿಸಿದವಳಲ್ಲ. ಸದಾ ನಗುತ್ತ ನಲಿಯುತ್ತ ಇರುವವಳು... ಒಂದರ್ಥದಲ್ಲಿ ಸದಾಸ್ಮಿತೆ! 'ಕೋಪ ಆ ಕ್ಷಣದ್ದು, ಸರ್–ಜೀ... ಸಂಬಂಧ ದೊಡ್ಡದು!' ಅವಳೇ ಹೇಳಿದ್ದಳು. ಆಡಿದಂತೆ ನಡೆಯುವವಳು ಕೂಡ. ಆಫೀಸು ಬಿಡೆಂದು ಹೇಳಿದಾಗಲೂ ಅಷ್ಟೆ, ಎಂದಿನಷ್ಟೇ ಸಭ್ಯವಾಗಿ ಸರಿದುಹೋದಳು. 'ಓಕೆ, ಸರ್... ವಿಲ್ ಸೀ ಯೂ ಸಮ್ ಟೈಮ್...' ಅಂತಂದು, 'ನೀವು ನನಗೆ ಗುರು ಇದ್ದ ಹಾಗೆ... ನಿಮ್ಮನ್ನು ಯಾವೊತ್ತೂ ಕಳಕೊಳ್ಳೋ ಇರಾದೆ ಇಲ್ಲ...' ಅನ್ನುವಾಗ ಕಣ್ಣುಗಳಲ್ಲಿ ದುಃಖಾವಮಾನದ ಪಸೆಯಾದರೂ ಇತ್ತೋ ಇಲ್ಲವೋ, ವ್ಯಕ್ತವಾಗಲಿಲ್ಲ. ಈ ಸಲುವಾಗಿಯೇನೇ, ನನಗೆ ಅವಳು ಆಗೀಗ ಕಳಿಸುವ ಮೆಸೇಜುಗಳನ್ನು ಅವಗಣಿಸಲಾಗುವುದಿಲ್ಲ. ನೀನೇನು ನಾನೇನು... ಎಂಬ ಸ್ವಯದ ಧೋರಣೆಯಿಟ್ಟು ಅಲ್ಲಗಳೆಯಲಾಗುವುದಿಲ್ಲ.

ಆಫೀಸು ಬಿಟ್ಟ ಮೇಲೆ ನನ್ನನ್ನು ಕಾಣಬಂದ ಕುಣಾಲಿಯನ್ನು, ನಾನು ಮೊದಲು ಕೇಳಿದ್ದೇ